ಹೊಸೆದ ಮಿಥ್ಯೆಯ ಹೊಸ ಉರುಳು ನ್ಯಾಯದೊಡತಿಗೆ
ಸ್ವನೇತ್ರಗಳನ್ನು ಸ್ವಕುಚ ಮರ್ದನದಂತೆ ಇರಿದುಕೊಂಡ
ಕುರುಡು ರಾಜ್ಯದಲ್ಲಿ ಕತ್ತಲದೊಂದೇ ಕಾನೂನು
ಕಾಣುವ ಬಣ್ಣವೊಂದೇ, ಆಣತಿಯ ಧ್ವನಿ – ಭಾಷೆಯೊಂದೇ
ಏಕಾಣುವಿನಂತೆ ಎಲ್ಲೆಲ್ಲೂ ವಿಕೃತ ವಾಕರಿಕೆಯ ಕ್ಲೀಷೆ
ಈ ನೇತ್ರಹೀನ, ಶ್ರುತಿಹೀನರ ಮತಿಗೆ ಮುಟ್ಟಬಲ್ಲದಾದರೂ ಹೇಗೆ
'ಈಶ್ವರ ಅಲ್ಲಾ ತೇರೋ ನಾಮ್'
ಹೇ ರಾಮ್! ಹೇ ರಾಮ್!!

ನಿನ್ನ ಚರಕವೂ ಹತ್ತಿ–ತಕಲಿಯ ಸಂಗ ತೊರೆದು
ನಕಲಿ ಲೋಹದೆಳೆಗಳನ್ನು ನೂಲುತ್ತಿದೆ
ತಂತ್ರ ಬದಲಾಗಿದ್ದರೂ ಸ್ವದೇಶಿಯೆ!
ಮೇಕ್ ಇನ್ ಇಂಡಿಯಾದ ನವ ಮಾಯೆ
ಬೇಕು ಬೇಕಾದ್ದನ್ನೀಗ ನೇಯಬಹುದು ಸರಪಳಿ... ಸಂಕೋಲೆ...
ನಿನ್ನ ಮಾಂತ್ರಿಕ ಕೋಲಿನ ವರಸೆಯೂ ಬದಲಾದ ಲೀಲೆ!
ಅಹಿಂಸೆಯನ್ನು ಕಲಿಸುತ್ತಿದೆ ಹಿಂಸೆ
ಗಾಳಿಗೂ ನೀಡಲಾಗುತ್ತಿದೆ ಉಸಿರಾಡುವ ಹೊಸ ವರಸೆ!

ಸತ್ಯವ್ರತವೇ ಗೈರಾಗಿ, ರಾಮಜಪವೂ ಸವಕಲಾಗಿ
ಅಪದ್ಧಗಳೇ ಆಪದ್ಧರ್ಮವಾಗಿ
ಮಿಥ್ಯೋಪನಿಷತ್ತೇ ಕಲಿಸಂಹಿತೆಯಾಗಿದೆ
ಬೇರು ಭದ್ರವಿಲ್ಲದ ನಂಬಿಕೆಗಳು – ತಾವೇ ಸ್ವಯಂ
ಈಡಾಡುತ್ತ ಜೀವಾದಿಜೀವಗಳನ್ನು – ಲಜ್ಜೆಗೇಡಿ
ಈಶ್ವರನಾಣತಿಯಿಲ್ಲದೆ ಹುಲ್ಲುಕಡ್ಡಿಯೂ ಕದಲದೆನ್ನುತ್ತಿವೆ
ಉಗ್ರ ದೇವತೆಗಳ ಹತ್ತೂ ಕೈಗಳ ಹತಾರಗಳು
ಅನಿಂದ್ರಿಯ ಕುಲಜರ ಹಸ್ತಗತವಾಗಿ
ನಿಷ್ಪಾಪಿ ನೆತ್ತರು ಚಿಲ್ಲೆಂದು ಚಿಮ್ಮಿ ಹವಿಸ್ಸಾಗುತ್ತಿದೆ

ವಿಶ್ವವೊಂದೇ ಅನಂತವಲ್ಲ; ಜನರ
ಮೂರ್ಖತನವೂ ಅನಂತವಾದುದು
ಎಂದ ಜ್ಞಾನಿ ವಿಜ್ಞಾನಿಯ ಹಂಗಿಸುವಂತೆ
ಅದೇ ಆ 'ಅವರು'
ಮನುಷ್ಯರೆದೆಯ ಮೀಟಬಾರದ ತಂತಿಗಳನ್ನು
ಮೀಟಿಯೇ ಮೀಟುತ್ತಿದ್ದಾರೆ
ಅಂದು ಗೋಡ್ಸೆ ನಿನ್ನೆದೆಗೇ ಕೈತೂರಿ ಮೀಟಿದಂತೆ!
ಹೇ ರಾಮ್! ಹೇ ರಾಮ್!!

● ಲಕ್ಷ್ಮೀಪತಿ ಕೋಲಾರ